ನಮ್ಮ ಕನ್ನಡ ಪಂಡಿತರು ಕೊಡುತ್ತಿದ್ದ ಲೈಬ್ರರಿ ಪುಸ್ತಕಗಳನ್ನು ಓದುತ್ತಾ ಇದ್ದೆ. ಬೆಳೆಯುತ್ತಾ ಬೆಳೆಯುತ್ತಾ ಹಾಡು ಸ್ವಲ್ಪ ದೂರವಾಯಿತು. ಓದು ಸಂಪೂರ್ಣವಾಗಿ ಆವರಿಸಿಕೊಂಡಿತು. ಹೊಸಗನ್ನಡ ಪದ್ಯಗಳನ್ನು ಓದತೊಡಗಿದ್ದು ಆ ಕಾಲದಲ್ಲಿ. ಬೇಂದ್ರೆ, ಕುವೆಂಪು, ನರಸಿಂಹಸ್ವಾಮಿ ಇವರನ್ನು ಹೆಚ್ಚಾಗಿ ಓದುತ್ತಾ ಇದ್ದೆ! ಆಗಷ್ಟೇ ಎದೆಯೊಳಗೆ ಕವಿತೆ ಕೆರಳುತ್ತಾ ಇತ್ತು. ಬೇಂದ್ರೆ, ಕುವೆಂಪು, ಪಂಜೆ ಮೊದಲಾದವರನ್ನು ಅನುಕರಿಸಿ ಪದ್ಯಗಳನ್ನು ಛಂದೋಬದ್ಧವಾಗಿ ಬರೆಯುತ್ತಿದ್ದ ಕಾಲವದು.

ಬೇಂದ್ರೆ ಕಾವ್ಯದ ಮಾಯಾಜಾಲ ನನ್ನನ್ನು ಮರುಳುಮಾಡಿತ್ತು. ಅವರ ಪದ್ಯಗಳನ್ನು ಓದುವಂತೆಯೇ ಹಾಡುವುದೂ ಸಾಧ್ಯವಿತ್ತು. ನಮ್ಮ ಗಣಿತದ ಮೇಷ್ಟ್ರು ಅದ್ಭುತವಾಗಿ ಬೇಂದ್ರೆಯನ್ನು ಹಾಡುತ್ತಾ ಇದ್ದರು. ಇನ್ನೇನು ಹೋಯಿತು ಎನ್ನುವಾಗ ಹಾಡು ಮತ್ತೆ ಬಾಗಿಲು ಬಡಿಯಿತು. ಕಾಲೇಜು ದಿನಗಳಲ್ಲಿ ನಾನು ಕೇಳುತ್ತಿದ್ದುದು ಕಾಳಿಂಗರಾವ್, ಅನಂತಸ್ವಾಮಿ, ಲೀಲಾವತಿ ಅವರ ಹಾಡುಗಳನ್ನಾದರೂ, ನವ್ಯ ಕಾವ್ಯ ಪ್ರವರ್ಧಮಾನವಾಗುತ್ತಿದ್ದ ಆ ದಿನಗಳಲ್ಲಿ ನಾನು ಬರೆಯುತ್ತಿದ್ದದ್ದು ಓದಲಿಕ್ಕೆ ಮಾತ್ರ ಒಗ್ಗುತ್ತಿದ್ದ ಮುಕ್ತಛಂದದ ಕವಿತೆಗಳನ್ನು! ಇಪ್ಪತ್ತೆರಡನೇ ವಯಸ್ಸಲ್ಲಿ ನಾನು ಹೈಸ್ಕೂಲ್ ಮೇಷ್ಟ್ರಾದಾಗ ನನ್ನ 'ಪರಿವೃತ್ತ' ಎಂಬ ಮೊದಲ ಸಂಗ್ರಹ ಪ್ರಕಟವಾಯಿತು. ಆಗ ಚಿತ್ರದುರ್ಗದಲ್ಲಿ ಹಿರಿಯೂರು ಸತ್ಯನಾರಾಯಣ ಎಂಬ ಕಂಚಿನ ಕಂಠದ ಗಾಯಕರು ಹಾಡುವ ಬೇಂದ್ರೆ ಗೀತೆಗಳನ್ನು ಕೇಳಿ, ಮರುಳಾಗಿ, ಅವರನ್ನು ಭೆಟ್ಟಿಮಾಡಿ "ನನ್ನ ಕವಿತೆಗಳನ್ನು ಹಾಡುವಿರಾ?" ಎಂದು ಅವರನ್ನು ಕೇಳಿಕೊಂಡೆ. ನಿಮ್ಮ ಕವಿತಾ ಸಂಗ್ರಹ ತಂದುಕೊಡಿ. ಖಂಡಿತ ಪ್ರಯತ್ನಿಸುತ್ತೇನೆ ಎಂದರು ಅವರು. ಒಂದು ತಿಂಗಳಾದ ಮೇಲೆ ಸತ್ಯನಾರಾಯಣ ಮತ್ತೆ ಸಿಕ್ಕಾಗ "ನಿಮ್ಮ ಕವಿತೆಗಳು ಓದಬೇಕಾದ ಕವಿತೆಗಳು... ಅವನ್ನು ಹಾಡುವುದಕ್ಕೆ ಬರುವುದಿಲ್ಲ ಸ್ವಾಮಿ. ಸ್ಸಾರಿ!" ಎಂದು ಕೈ ಆಡಿಸಿಬಿಟ್ಟರು. ನಿತ್ಯದ ನುಡಿಗಟ್ಟನ್ನೇ ಕಾವ್ಯಕ್ಕೆ ತರಬೇಕೆಂಬುದು ಆಗ ಪ್ರವರ್ಧಮಾನರಾಗಿದ್ದ ಹಿರಿಯ ಕವಿಗಳ ಸಂಕಲ್ಪವಾಗಿತ್ತು. ಹಾಗಾಗಿ ನನ್ನ ಬರವಣಿಗೆಯೂ ಅದೇ ಮಾರ್ಗವನ್ನು ಅನುಸರಿಸುತ್ತಾ ಇತ್ತು. ಬೇಚರಾಕು ಎಂಬ ಪದವನ್ನು ನನ್ನ ಕವಿತೆಯೊಂದರಲ್ಲಿ ಬಳಸಿದ್ದೆ. ಸತ್ಯನಾರಾಯಣ ನಕ್ಕು ಬೇಚರಾಕು ಎಂಬ ಪದವನ್ನು ನಾನು ಹೇಗೆ ಹಾಡಲಿ ?! – ಎಂದರು.

ನನಗೆ ಆ ದಿನಗಳಲ್ಲಿ ಕನ್ನಡ ಸಿನಿಮಾ ಹಾಡುಗಳನ್ನು ಕೇಳುವ ಖಯಾಲಿ ತುಂಬಾ ಇತ್ತು. ಪಿ.ಬಿ. ಶ್ರೀನಿವಾಸ್ ನನ್ನ ಮೆಚ್ಚಿನ ಗಾಯಕರಾಗಿದ್ದರು. ಅವರನ್ನು ಅನುಕರಿಸಿ ಕಾಲೇಜು ದಿನಗಳಲ್ಲಿ ನಾನೂ ಸುಮಾರಾಗಿ ಹಾಡುತ್ತಾ ಇದ್ದೆ! ಆಗ 'ಭಕ್ತ ಕನಕದಾಸ' ಎಂಬ ಸಿನಿಮಾ ಬಂದಿತ್ತು. ಆ ಸಿನಿಮಾದಲ್ಲಿದ್ದ ವೆಂಕಟರಾಜು ಮಾಡಿದ್ದ ಹಾಡುಗಳಿಗೆ ನಾನು ಮನಸೋತಿದ್ದೆ. ಅಣ್ಣತಂಗಿ, ಅಮರಶಿಲ್ಪಿ ಜಕಣಾಚಾರಿ, ಕರುಣೆಯೇ ಕುಟುಂಬದ ಕಣ್ಣು, ಭೂದಾನ ಮೊದಲಾದ ಚಿತ್ರಗಳು ನನ್ನ ಮನಸ್ಸನ್ನು ಆವರಿಸಿದ್ದವು. ಕುರಾಸಿ, ಚಿ. ಸದಾಶಿವಯ್ಯ, ಪ್ರಭಾಕರಶಾಸ್ತ್ರಿ, ವಿಜಯನಾರಸಿಂಹ, ನರೇಂದ್ರಬಾಬು ಮೊದಲಾದವರು ಬರೆದ ಸಿನಿಮಾ ಹಾಡುಗಳು ನನಗೆ ಬಾಯಿಪಾಠವಾಗಿದ್ದವು. ಆಗೆಲ್ಲಾ ಸಿನಿಮಾ ಹಾಡುಗಳ ಪುಟ್ಟ ಪುಸ್ತಕಗಳನ್ನು ಸಿನಿಮಾ ಟಾಕೀಸಲ್ಲೇ ಮಾರುತ್ತಾ ಇದ್ದರು. ಅವಕ್ಕೆ ಬಣ್ಣದ ಕವರುಗಳು. ಅವು ಏಳೆಂಟು ಪುಟಗಳ ಸಣ್ಣ ಪುಸ್ತಕಗಳು. ಅವನ್ನು ಸಂಗ್ರಹಿಸಿ, ದಾರದಲ್ಲಿ ಅಂಥ ಹತ್ತಾರು ಪುಸ್ತಕಗಳನ್ನು ಪೋಣಿಸಿ ಇಟ್ಟುಕೊಳ್ಳುತ್ತಿದ್ದೆ.

ನಾನು ಬರೆಯುತ್ತಿದ್ದದ್ದು ಫ್ರೀವರ್ಸಿನ ವಾಚನಕ್ಕೆ ದಕ್ಕುವ ಕವಿತೆಗಳನ್ನಾದರೂ ಹಾಡು ಕವಿತೆಗಿಂತ ಕಮ್ಮಿ ಎಂದು ನನಗೆ ಯಾವಾಗಲೂ ಅನ್ನಿಸಿರಲಿಲ್ಲ. ಬೇಂದ್ರೆ, ಕುವೆಂಪು, ಜಿಎಸ್ಸೆಸ್, ನರಸಿಂಹಸ್ವಾಮಿಯವರ ಕವಿತೆ–ಗೀತೆಗಳಿಗೆ ನಾನು ಮಾರುಹೋಗಿದ್ದೆ. ಬೇಂದ್ರೆಯಲ್ಲಿ ಕವಿತೆಯಿಂದ ಗೀತೆಗೆ, ಗೀತೆಯಿಂದ ಕವಿತೆಗೆ ಅವರ ಪ್ರತಿಭೆ ನಿರಾತಂಕವಾಗಿ ಚಲಿಸುತ್ತಾ ಇತ್ತು. ಕವನಕ್ಕೆ ಸಮಾಸಮ